ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾಂಡೇಲಿ.

**ಸಿ.ಸಿ.ನಂ. 201—2017**

ಫಿರ್ಯಾದಿ : ಕರ್ನಾಟಕ ಸರ್ಕಾರ

ವಿರುದ್ಧ

ಆರೋಪಿತರು : ಮಂಜುನಾಥ ತಂದೆ ಬಾಬು ಲಮಾನಿ
ವಯಾಃ 32 ವರ್ಷ, ವಾಸ ಃ ಹೊಸನ್ನ ಚರ್ಚ ಹತ್ತಿರ
ಗಾಂಧಿನಗರ, ದಾಂಡೇಲಿ

## ದೋಷಾರೋಪಣೆ

ನಾನು, ಶ್ರೀಮತಿ ತೆಂಡ್ರಲ್.ಕೆ, ಪ್ರ.ದ.ನ್ಯಾ.ದಂ., ದಾಂಡೇಲಿ ಆದ ನಾನು ಈ ಮೂಲಕ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ಆರೋಪಿತರಾದ ನೀವು ದಿಃ 09-02-2017 ರಂದು ಸಾಯಂಕಾಲ 4-30 ಗಂಟೆಗೆ ದಾಂಡೇಲಿ ನಗರ ಪೋಲಿಸ ಠಾಣಾ ಸರಹದ್ದಿನ ದಾಂಡೇಲಪ್ಪಾ ಬಾರಿನ ಬಲಕ್ಕೆ ಭರ್ಚಿ ರಸ್ತೆಯಿಂದ ಸಂಡೇ ಮಾರ್ಕೆಟ್ ಕಡೆಗೆ ಹಾದು ಹೋದ ಕಚ್ಚಾ ರಸ್ತೆಯಲ್ಲಿ ಫಿರ್ಯಾದಿಯ ಗೂಡಂಗಡಿ ಎದುರಿಗೆ ಪಿರ್ಯಾದಿಯ ಹತ್ತಿರ ನಿನಗೆ ಕೊಡ ಬೇಕಾದ ಹಣವನ್ನು ಕೊಡು ಈಗ ಅಂತಾ ಕೇಳಿದಾಗ ಫಿರ್ಯಾದಿಯು ನಾಳೆ ಕೊಡುವುದಾಗಿ ಹೇಳಿದಾಗ ನೀವು ಪಿರ್ಯಾದಿಗೆ ರಾಂಡಕೆ, ಚಿನಾಲಿಕೆ, ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಭಾ.ದಂ.ಸಂ. ಕಲಂ 504 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ಆರೋಪಿಯನ್ನು ಅಡ್ಡಗಟ್ಟಿ ತಡೆದು, ಈ ಮೂಲಕ ಭಾ.ದಂ.ಸಂ. ಕಲಂ 341 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ಅಲ್ಲಿಯೇ ಬಿದ್ದ ಒಡೆದ ಸೋಡಾ ಬಾಟಲಿಯ ಗಾಜಿನಿಂದ ಫಿರ್ಯಾದಿಯ ಎಡಕಣ್ಣಿನ ಹುಬ್ಬಿನ ಮೇಲೆ ಹೊಡೆದು ಸ್ವಇಚ್ಛೆಯಿಂದ ಸಾದಾ ಸ್ವರೂಪದ ಗಾಯಪಡಿಸಿ, ಭಾ.ದಂ.ಸಂ. ಕಲಂ 324 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ನಿಮ್ಮ ಕೈಯಿಂದ ಪಿರ್ಯಾದಿಯ ತಲೆಗೆ ಹಾಗೂ ಮೈಗೆ ಹೊಡೆದು ಫಿರ್ಯಾದಿಗೆ ಸ್ವಇಚ್ಛೆಯಿಂದ ಸಾದಾ ಸ್ವರೂಪದ ಗಾಯಪಡಿಸಿ, ಭಾ.ದಂ.ಸಂ. ಕಲಂ 323 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀವು ಫಿರ್ಯಾದಿಯು ಚೀರಾಡಿದಾಗ ಅಲ್ಲಿ ಜನ ಸೇರುವುದನ್ನು ನೋಡಿ ಅಲ್ಲಿಂದ ಹೋಗುವಾಗ ನೀನು ಈ ದಿವಸ ಬದುಕ್ಕಿದ್ದಿಯಾ ಇನ್ನೊಂದು ದಿನ ನಿನ್ನನ್ನು ನೋಡಿಕೊಳ್ಳುತ್ತೇನೆ ಅಂತಾ ಜೀವ ಬೆದರಿಕೆ ಹಾಕಿ ಭಾ.ದಂ.ಸಂ. ಕಲಂ 506 ರನ್ವಯ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಸದರ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಜರುಗುವುದರಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಾಂಡೇಲಿ.

ದಿಃ 13-11-2017

ಪ್ರ.ದ.ನ್ಯಾ.ದಂ., ದಾಂಡೇಲಿ.